**ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಡಾ: ತೇಜಸ್ವಿನಿಗೌಡ ರವರ ನಿಯಮ 72ರಡಿಯ ಗಮನ ಸೆಳೆಯುವ ಸೂಚನೆಗೆ ಉತ್ತರ:**

**ಪ್ರಶ್ನೆ:**

**ಆಧುನಿಕ ಜೀವನದಲ್ಲಿ ಇತ್ತೀಚೆಗೆ ಅವಿವಾಹಿತ ಯುವಕ-ಯುವತಿಯರು ಒಟ್ಟಿಗೆ ಜೀವಿಸುವ 'Living in relations' ಎಂಬ ಹೊಸ ರೂಢಿಯಿಂದಾಗಿ ಮಹಿಳೆಯರ ವಿರುದ್ಧ ಅಪರಾಧ ಪ್ರಕರಣಗಳು ಹೆಚ್ಚುತ್ತಿದ್ದು ಆತ್ಮಹತ್ಯಾ ಪ್ರಕರಣಗಳಲ್ಲಿ, ಸುಟ್ಟಗಾಯಗಳ ವಿಭಾಗದಲ್ಲಿ ದಾಖಲಾಗುತ್ತಿರುವ ಮಹಿಳಾ ಬಾಧಿತರ ಸಂಖ್ಯೆಯಲ್ಲಿ ತುಂಬಾ ಏರಿಕೆಯಾಗಿರುವ ಕುರಿತು.**

**ಉತ್ತರ:**

ರಾಜ್ಯದಲ್ಲಿ ಕಳೆದ 3 ವರ್ಷದಲ್ಲಿ ಲೀವಿಂಗ್ ಇನ್ ರಿಲೇಷನ್ ಸಂಬಂಧದಲ್ಲಿ ವರದಿಯಾಗಿರುವ ಮಹಿಳೆಯರ ಆತ್ಮಹತ್ಯೆ ಪ್ರಕರಣಗಳು ಹಾಗೂ ಅವರ ಮೇಲಿನ ಅತ್ಯಾಚಾರ, ವಂಚನೆ, ಮೋಸ, ಆತ್ಮಹತ್ಯೆಗೆ ಪ್ರೇರೇಪಣೆ, ಕೊಲೆ ಯತ್ನ ಹಾಗೂ ದೌರ್ಜನ್ಯದಂತಹ ಇತರೆ ಅಪರಾಧ ಪ್ರಕರಣಗಳ ಅಂಕಿ-ಅಂಶಗಳು ಈ ಕೆಳಕಂಡಂತಿರುತ್ತದೆ.

| ಕ್ರ. ಸಂ. | ಘಟಕದ ಹೆಸರು | 2020 | | 2021 | | 2022 | | 2023 (ಜೂನ್ 30) | |
|---|---|---|---|---|---|---|---|---|---|
| | | ಆತ್ಮಹತ್ಯೆ | ದೌರ್ಜನ್ಯ | ಆತ್ಮಹತ್ಯೆ | ದೌರ್ಜನ್ಯ | ಆತ್ಮಹತ್ಯೆ | ದೌರ್ಜನ್ಯ | ಆತ್ಮಹತ್ಯೆ | ದೌರ್ಜನ್ಯ |
| 01 | ಬೆಂಗಳೂರು ನಗರ | 1 | 5 | 2 | 8 | 0 | 16 | 4 | 8 |
| 02 | ಮೈಸೂರು ನಗರ | 0 | 0 | 0 | 0 | 0 | 0 | 1 | 0 |
| 03 | ಕಲಬುರ್ಗಿ ನಗರ | 0 | 0 | 0 | 0 | 0 | 2 | 0 | 0 |
| 04 | ಬೆಂಗಳೂರು ಜಿಲ್ಲೆ | 0 | 0 | 0 | 1 | 0 | 0 | 0 | 0 |
| 05 | ಹಾಸನ ಜಿಲ್ಲೆ | 0 | 0 | 0 | 0 | 1 | 0 | 0 | 0 |

**ಸರ್ಕಾರವು ರಾಜ್ಯದಲ್ಲಿ ಮಹಿಳೆಯರ ಸುರಕ್ಷತೆ ಹಾಗೂ ರಕ್ಷಣೆಗಾಗಿ ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿರುತ್ತದೆ.**

- ಮಹಿಳೆಯರ ಮೇಲಿನ ದೌರ್ಜನ್ಯವನ್ನು ತಡೆಗಟ್ಟುವ ನಿಟ್ಟಿನಲ್ಲಿ ನಿರ್ಭಯಾ ಯೋಜನೆಯಡಿ ರಾಜ್ಯದ ಪೊಲೀಸ್ ಠಾಣೆಗಳಲ್ಲಿ 1050 ವುಮೆನ್ ಹೆಲ್ಪ್ ಡೆಸ್ಕ್‌ಗಳನ್ನು ಸ್ಥಾಪಿಸಲಾಗಿರುತ್ತದೆ.
- ಅಪರಿಚಿತ ವ್ಯಕ್ತಿಗಳ ಬಳಿ ಸಂಪರ್ಕ ಇಟ್ಟುಕೊಳ್ಳದಂತೆ, ಆಸೆ ಆಮಿಷಗಳನ್ನು ಒಡ್ಡುವ ಆಸಾಮಿಗಳ ಬಗ್ಗೆ ಮಹಿಳೆಯರಿಗೆ & ಮಕ್ಕಳಿಗೆ ಹಾಗೂ ಗ್ರಾಮಗಳಲ್ಲಿ ಸೂಕ್ತ ತಿಳುವಳಿಕೆಗಳನ್ನು ನೀಡಲಾಗಿರುತ್ತದೆ.
- ಚಾಲ್ತಿಯಲ್ಲಿರುವ ಸಾಮಾಜಿಕ ಜಾಲತಾಣಗಳಾದ ಬ್ಲಾಗ್, ಟ್ವಿಟರ್, ಫೇಸ್ ಬುಕ್, ಪೊಲೀಸ್ ವೆಬ್ ಸೈಟ್ ಹಾಗೂ ಇತರೆ ಜಾಲತಾಣಗಳ ಮೂಲಕ ಮಾನವ ಕಳ್ಳ ಸಾಗಾಣೆ ಬಗ್ಗೆ ಜಾಗೃತಿ ಮೂಡಿಸುವ ಸಂದೇಶವನ್ನು ಪ್ರಕಟಿಸಲಾಗಿದೆ.

- ದೂರುದಾರರುಗಳಿಗೆ/ ಸಂತ್ರಸ್ತರುಗಳಿಗಾಗಿ ಪ್ರತಿ ಪೋಲೀಸ್ ಠಾಣೆಗಳಲ್ಲಿ ಅಧಿಕಾರಿಗಳನ್ನು ಸಂಪರ್ಕಿಸಲು ಅವರುಗಳ ದೂರವಾಣಿ ಸಂಖ್ಯೆಗಳುಳ್ಳ ಫಲಕಗಳನ್ನು ಹಾಕಲಾಗಿದೆ.
- ಮಹಿಳೆಯರ ಸುರಕ್ಷತೆಯ ಬಗ್ಗೆ ಹೆಚ್ಚಿನ ಆದ್ಯತೆ ಕೊಟ್ಟು ಮಹಿಳಾ ಸಹಾಯವಾಣಿ ಕೇಂದ್ರ "ಸ್ಪಂದನ"ವನ್ನು ಬೆಂಗಳೂರು ನಗರದ ಮಲ್ಲೇಶ್ವರಂ ಮತ್ತು ಬಸವನಗುಡಿಯಲ್ಲಿ ತೆರೆಯಲಾಗಿದೆ.
- ದಿನದ 24 ಗಂಟೆಯೂ ಸಹ ಮಹಿಳೆಯರ ಮತ್ತು ಮಕ್ಕಳ ಸುರಕ್ಷತೆಗಾಗಿ "ಪಿಂಕ್ ಹೊಯ್ಸಳ" ಮತ್ತು 112 ಗಸ್ತುವಾಹನ ಗಸ್ತು ಕಾರ್ಯ ನಿರ್ವಹಿಸುತ್ತಿವೆ.
- ಕಷ್ಟದಲ್ಲಿರುವ ಮಹಿಳೆಯರ ಸಹಾಯಕ್ಕಾಗಿ ಮಹಿಳಾ ಸಹಾಯವಾಣಿ ಸಂಖ್ಯೆ: 1091 ಮತ್ತು 22943225 ಕಾರ್ಯ ನಿರ್ವಹಿಸುತ್ತಿವೆ.
- ಸಾರ್ವಜನಿಕ ಸ್ಥಳಗಳಲ್ಲಿ ಕರಪತ್ರ, ಭಿತ್ತಿಪತ್ರ, ಬ್ಯಾನರ್ಸ್ ಪೋಸ್ಟರ್ಸ್‌ಗಳು ಪ್ರಕಟಿಸುವುದು ಹಾಗೂ ಸಣ್ಣ ನಾಟಕಗಳು, ಚಿತ್ರಕಲೆಯ ಸ್ಪರ್ಧೆ ಏರ್ಪಡಿಸುವುದು ಮತ್ತು ಮಹಿಳಾ ದೌರ್ಜನ್ಯದ ಬಗ್ಗೆ ಪೋಲೀಸರಿಗೆ ಮಾಹಿತಿ ಒದಗಿಸುವಂತೆ ಜನ ಜಾಗೃತಿ ಕಾರ್ಯಕ್ರಮಗಳನ್ನು ಏರ್ಪಡಿಸಿ ಅರಿವು ಮೂಡಿಸಲಾಗುತ್ತಿದೆ.
- ಅತ್ಯಾಚಾರ, ಪೋಕ್ಸೋ ಪ್ರಕರಣಗಳ ತನಿಖೆಯನ್ನು ಅಪರಾಧ ಕಾನೂನು ತಿದ್ದುಪಡಿ ಸುಗ್ರೀವಾಜ್ಞೆ, 2018, ರಲ್ಲಿನ ತಿದ್ದುಪಡಿಯಂತೆ ನಿಗಧಿಪಡಿಸಿರುವ 60 ದಿನಗಳ ಕಾಲಮಿತಿಯಲ್ಲಿ ತನಿಖೆಯನ್ನು ಪೂರ್ಣಗೊಳಿಸಲು ರಾಜ್ಯದ ಎಲ್ಲಾ ಘಟಕಾಧಿಕಾರಿಗಳಿಗೆ ಸುತ್ತೋಲೆಯ ಮೂಲಕ ನಿರ್ದೇಶನಗಳನ್ನು ನೀಡಲಾಗಿರುತ್ತದೆ.
- ಕಮ್ಯುನಿಟಿ ಪೋಲೀಸಿಂಗ್ ಮೂಲಕ ಜನಸಂಪರ್ಕ ಮತ್ತು ಜನಸ್ನೇಹಿ ಸಭೆಗಳನ್ನು ನಡೆಸಲಾಗುತ್ತಿದೆ.
- ಮಹಿಳೆಯರ ಮತ್ತು ಮಕ್ಕಳ ಅನೈತಿಕ ಸಾಗಾಣಿಗೆ ತಡೆಗಟ್ಟುವ ನಿಟ್ಟಿನಲ್ಲಿ ನಿರ್ಭಯಾ ಯೋಜನೆಯಡಿ ರಾಜ್ಯದಲ್ಲಿ ಒಟ್ಟಾರೆಯಾಗಿ 35 ಮಾನವ ಕಳ್ಳಸಾಗಾಣಿಕೆ ನಿಷೇಧ ಘಟಕಗಳನ್ನು ಸ್ಥಾಪಿಸಲಾಗಿದೆ.

---

HD 17 SDN 2023

(ಡಾ:ಜಿ.ಪರಮೇಶ್ವರ)
ಗೃಹ ಸಚಿವರು